ಸಂ:M1/TRNSLINE/RenewGreen/CR-31/ 2022-23

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ,
ಬಳ್ಳಾರಿ ವೃತ್ತ, ಬಳ್ಳಾರಿ,
ದಿನಾಂಕ: 04-10-2023.

ಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯ ಸಂರಕ್ಷಣೆ),
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-03.

ಮಾನ್ಯರೇ,

ವಿಷಯ: Diversion of 4.338 Ha of Forest land for Construction of 7.005 kms of 33 KV D/C Transmission line from the proposed 220/33 KV Pooling Substation at Kakkuppi village to the proposed windfarm in Sy.No.286, 368, 283, 282, 280, 301, 302, 304, 306 and 314 of Kakkuppi Village in Kudligi Taluk and Sy.No.229 of Agrahara Village Kudligi Taluk in Ballari Forest Division of Karnataka State in favour of M/s. Renew Green Energy Solutions Private Limited –reg.,

ಉಲ್ಲೇಖ: 1) ತಮ್ಮ ಕಚೇರಿ ಪತ್ರ ಸಂ: A5-4/(GFL)/17/2020-FC, ದಿ: 13-7-2023.
2) ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ: 20-7-2023.
3) ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ ಇವರ ಪತ್ರ ಸಂ:DCF/VDH/Renew Green/2023-24, ದಿನಾಂಕ: 26-9-2023.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿದಂತೆ, ಉಲ್ಲೇಖಿತ (1)ರ ತಮ್ಮ ಕಚೇರಿ ಪತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಪತ್ರ ದಿನಾಂಕ: 5-7-2023ನ್ನು ಲಗತ್ತಿಸಿ ಕಳುಹಿಸುತ್ತಾ, ಪ್ರಸ್ತಾಪಿತ ವಿದ್ಯುತ್ ಮಾರ್ಗ ಯೋಜನೆಗೆ ಪರ್ಯಾಯ ಮಾರ್ಗಗಳು ಹಾಗೂ ಯೋಜನೆಯ ಅವಶ್ಯಕತೆ ಕುರಿತು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯ/ವರದಿಯನ್ನು ಕೂಡಲೇ ಸಲ್ಲಿಸಲು ಸೂಚಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ ಇವರಿಗೆ ಈ ಕಚೇರಿಯ ಉಲ್ಲೇಖಿತ (2)ರ ಪತ್ರದಲ್ಲಿ ತಮ್ಮ ನಿರ್ದೇಶನದಂತೆ, ಪ್ರಸ್ತಾಪಿತ ವಿದ್ಯುತ್ ಮಾರ್ಗ ಯೋಜನೆಗೆ ಪರ್ಯಾಯ ಮಾರ್ಗಗಳು ಹಾಗೂ ಯೋಜನೆಯ ಅವಶ್ಯಕತೆ ಕುರಿತು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯ/ವರದಿಯನ್ನು ಕೂಡಲೇ ಮುಂದಿನ ಕ್ರಮಕ್ಕಾಗಿ ಈ ಕಚೇರಿ ಸಲ್ಲಿಸಲು ತಿಳಿಸಲಾಗಿರುತ್ತದೆ.

ಅದರಂತೆ, ಉಲ್ಲೇಖಿತ (3)ರ ಪತ್ರದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ ಇವರು ಪ್ರಸ್ತಾವನೆಯಲ್ಲಿನ 5 ಮಾರ್ಗಗಳ ಪ್ರದೇಶಗಳನ್ನು ಅಧೀನ ಅಧಿಕಾರಿಗಳಿಂದ ಸ್ಥಳ ತಪಾಸಣೆ ಮಾಡಿಸಿ, ಅವರಿಂದ ವರದಿಯನ್ನು ಪಡೆದು, ರೂಟ್-1, ರೂಟ್-3, ರೂಟ್-4 ಮತ್ತು ರೂಟ್-5 ಮಾರ್ಗಗಳು ಸೂಕ್ತವಾಗಿರುವುದಿಲ್ಲವಾಗಿ ತಿಳಿಸುತ್ತಾ, ಸದರಿ ಮಾರ್ಗಗಳನ್ನು ತಿರಸ್ಕರಿಸಿ, ರೂಟ್-2ರ ಮಾರ್ಗವು ಅತಿ ಕಡಿಮೆ ಅರಣ್ಯ ಪ್ರದೇಶ ವಿಸ್ತೀರ್ಣ 4.338ಹೆಕ್ಟರ್‌ನ್ನು ಹೊಂದಿರುವುದರಿಂದ ಸದರಿ ಮಾರ್ಗವು ವಿದ್ಯುತ್ ಲೈನ್ ಹಾದು ಹೋಗುವುದಕ್ಕೆ ಸೂಕ್ತವಾಗಿರುತ್ತದೆಂದು ವರದಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ, ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ ಇವರ ವರದಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸುತ್ತಾ, ಸದರಿಯವರ ಶಿಫಾರಸ್ಸಿನಂತೆ ರೂಟ್-2ರ ಮಾರ್ಗವು ಅತಿ ಕಡಿಮೆ ಅರಣ್ಯ ಪ್ರದೇಶ ವಿಸ್ತೀರ್ಣ 4.338ಹೆಕ್ಟರ್‌ನ್ನು ಹೊಂದಿರುವುದರಿಂದ ಸದರಿ ಮಾರ್ಗವನ್ನು ಪರಿಗಣಿಸಲು ಕೋರಲಾಗಿದೆ.

ತಮ್ಮ ನಂಬುಗೆಯ,

ಸಹಿ/-
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವೃತ್ತ, ಬಳ್ಳಾರಿ.

ಪ್ರತಿಯನ್ನು: ಉಪ ಅರಣ್ಯ ಸಂರಕ್ಷಣಾಧಿಕಾರಿ, ವಿಜಯನಗರ ವಿಭಾಗ, ಹೊಸಪೇಟೆ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವೃತ್ತ, ಬಳ್ಳಾರಿ.

ರವಾನಿಸಲಾಗಿದೆ,
ದಿನಾಂಕ 4/10/23 ಸಹಿ